# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :987 |
| ಸದಸ್ಯರ ಹೆಸರು | :ಶ್ರೀ ಸಿ.ಎನ್. ಮಂಜೇಗೌಡ |
| ಉತ್ತರಿಸುವ ಸಚಿವರು | :ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸುವ ದಿನಾಂಕ | :20.08.2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಇ-ಡ್ರೈವ್ ಯೋಜನೆಯಡಿ ರಾಜ್ಯಕ್ಕೆ ಇದುವರೆಗೆ ಎಷ್ಟು ವಿದ್ಯುತ್ ಚಾಲಿತ ಬಸ್ಸುಗಳು ಮಂಜೂರಾಗಿವೆ; | ಭಾರತ ಸರ್ಕಾರದ ಭಾರೀ ಕೈಗಾರಿಕೆಗಳ ಸಚಿವಾಲಯವು PM Electric Drive Revolution in Innovative Vehicle Enhancement (PM E-DRIVE) ಎಂಬ ಯೋಜನೆಯನ್ನು ಪ್ರಾರಂಭಿಸಿದೆ. ಸದರಿ ಯೋಜನೆಗೆ ಕರ್ನಾಟಕ ರಾಜ್ಯದಿಂದ ಬೆಂಗಳೂರು ನಗರವು ಮಾತ್ರ ಅರ್ಹತೆ ಪಡೆದಿದ್ದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಒಟ್ಟು 4500 ವಿದ್ಯುತ್ ಚಾಲಿತ ಬಸ್ಸುಗಳನ್ನು operational expenditure (OPEX)/Gross Cost Contract (GCC) ಮಾದರಿಯಲ್ಲಿ ಒದಗಿಸಲು ಅನುಮೋದನೆ ನೀಡಲಾಗಿದೆ. ಸದರಿ ಬಸ್‌ಗಳ ಸುವ್ಯವಸ್ಥಿತ ಬಳಕೆಗಾಗಿ ಘಟಕಗಳನ್ನು ಗುರುತಿಸುವ ಮತ್ತು ಸದರಿ ಘಟಕಗಳಲ್ಲಿ ಎಲೆಕ್ಟ್ರಿಕ್ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂಬಂಧ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಕ್ರಮ ಕೈಗೊಳ್ಳುತ್ತಿದೆ.<br><br>ಸದರಿ ಯೋಜನೆಗೆ ಕೇಂದ್ರ ಸರ್ಕಾರವೇ ಟೆಂಡರ್ ಪ್ರಕ್ರಿಯೆ ನಡೆಸುತ್ತದೆ. ಅದರಂತೆ, ಎಲೆಕ್ಟ್ರಿಕ್ ಬಸ್ಸುಗಳನ್ನು ಜಿಸಿಸಿ ಮಾದರಿಯಲ್ಲಿ ಸ್ಪರ್ಧಾತ್ಮಕ ಬಿಡ್ಡಿಂಗ್‌ಗಾಗಿ ಒಟ್ಟುಗೂಡಿಸಲು CESL (Convergence Energy Services Ltd.,) ಇವರನ್ನು ನಾಮನಿರ್ದೇಶನ ಮಾಡಿದೆ. ಪ್ರತಿ kWh ಬ್ಯಾಟರಿ ಸಾಮರ್ಥ್ಯದ ಬಸ್‌ಗೆ ರೂ.10,000/- ಅಥವಾ ಬಸ್ ವೆಚ್ಚದ 20% ಅಥವಾ ಸ್ಟ್ಯಾಂಡರ್ಡ್ ಬಸ್‌ಗಳಿಗೆ ರೂ.35.00 ಲಕ್ಷ, ಮಿಡಿ ಬಸ್‌ಗಳಿಗೆ ರೂ.25.00 ಲಕ್ಷಗಳು ಮತ್ತು ಮಿನಿ ಬಸ್‌ಗಳಿಗೆ ರೂ.20.00 ಲಕ್ಷಗಳನ್ನು ಕೇಂದ್ರ ಸರ್ಕಾರವು ಪ್ರೋತ್ಸಾಹಧನ ನೀಡುತ್ತದೆ. ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಸಚಿವಾಲಯವು ಸದರಿ ಯೋಜನೆ ಅಡಿಯಲ್ಲಿ ಮಂಜೂರಾತಿ ನೀಡುವ ಅನುದಾನವನ್ನು ಸಬ್ಸಿಡಿಯಾಗಿ ಉಪಯೋಗಿಸಿಕೊಳ್ಳಲಾಗುವುದು. ಸದರಿ ಸಬ್ಸಿಡಿಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಆಯ್ಕೆಯಾಗುವ ಬಿಡ್ದುದಾರರಿಗೆ ಒದಗಿಸುತ್ತದೆ ಹಾಗೂ ಸಂಸ್ಥೆಯು ಟೆಂಡರ್‌ನಲ್ಲಿ ಸ್ವೀಕೃತವಾಗುವ ಪ್ರತಿ ಕಿ.ಮೀ.ನ ದರವನ್ನು ಬಸ್ಸುಗಳ ಕಾರ್ಯಾಚರಣೆಯಿಂದ ಗಳಿಸುವ ಆದಾಯದಿಂದ ಭರಿಸಬೇಕಾಗುತ್ತದೆ. |
| ಆ. | ಈ ಬಸ್ಸುಗಳನ್ನು ರಾಜ್ಯದ ಯಾವ ಯಾವ ನಗರ ಪ್ರದೇಶಗಳಲ್ಲಿ ಕಾರ್ಯಾಚರಣೆಗೊಳಿಸಲಾಗಿದೆ; | |
| ಇ. | ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವೆ ವಿದ್ಯುತ್ ಚಾಲಿತ ಬಸ್ಸುಗಳ ನಿರ್ವಹಣೆಗೆ ಸಂಬಂಧಿಸಿದಂತೆ ಆಗಿರುವ ಒಪ್ಪಂದಗಳೇನು ? | |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಮುಂದುವರೆದು, ಭಾರತ ಸರ್ಕಾರವು ಸಾರ್ವಜನಿಕ ಸಾರಿಗೆ ಸಂಸ್ಥೆಗಳಿಗೆ ಎಲೆಕ್ಟ್ರಿಕ್ ಬಸ್‌ಗಳ ಖರೀದಿ ಮತ್ತು ಕಾರ್ಯಾಚರಣೆಗಾಗಿ Payment Security Mechanism ವ್ಯವಸ್ಥೆಯನ್ನು ರೂಪಿಸಿದ್ದು, ಸದರಿ ವ್ಯವಸ್ಥೆಗೆ ರಾಜ್ಯ ಸರ್ಕಾರವು ಅನುಮೋದನೆ ನೀಡಿರುತ್ತದೆ.<br><br>ಮುಂದುವರೆದು, **ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಲ್ಲಿ** ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು (MoHUA) 'PM-eBus Sewa' ಯೋಜನೆಯನ್ನು ಕೈಗೆತ್ತಿಕೊಂಡಿರುತ್ತದೆ. ಭಾರತ ಸರ್ಕಾರವು ಸದರಿ ಇ-ಬಸ್ ಕಾರ್ಯಾಚರಣೆಗೆ MoHUA ಮೂಲಕ CESL (Convergence Energy Services Ltd.,) ರವರು ಒಟ್ಟು ವೆಚ್ಚದ ಒಪ್ಪಂದ (GCC-wet lease)-ಮಾದರಿಯ ಮೇಲೆ ಕೇಂದ್ರ ಸರ್ಕಾರವೇ ಟೆಂಡರ್ ಪ್ರಕ್ರಿಯೆ ನಡೆಸುತ್ತದೆ. ಸದರಿ ಯೋಜನೆಯಡಿಯಲ್ಲಿ ಆಯ್ಕೆಯಾದ ಕರ್ನಾಟಕ ರಾಜ್ಯದ 10 ನಗರಗಳಿಗೆ ಒಟ್ಟು 750 ಸಂಖ್ಯೆ ವಿದ್ಯುತ್ ಚಾಲಿತ ಬಸ್ಸುಗಳನ್ನು ಜಿಸಿಸಿ (Gross Cost Contract) ಆಧಾರದ ಮೇಲೆ ಒದಗಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುತ್ತದೆ. ಪ್ರಸ್ತುತ ಟೆಂಡರ್ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರವೇ ನಡೆಸುತ್ತದೆ.<br><br>**ನಿಗಮವಾರು ಬಸ್ಸುಗಳ ಹಂಚಿಕೆ ವಿವರ ಕೆಳಕಂಡಂತಿದೆ:-**<br><br>**ಕ.ರಾ.ರ.ಸಾ.ನಿಗಮ** PM e-bus sewa ಯೋಜನೆಯಡಿಯಲ್ಲಿ ಒಟ್ಟು 350 ಸಂಖ್ಯೆ ವಿದ್ಯುತ್ ಚಾಲಿತ ಬಸ್‌ಗಳು ನಿಗಮದ ವ್ಯಾಪ್ತಿಯಲ್ಲಿ ಬರುವ ಮಂಗಳೂರು, ಮೈಸೂರು, ದಾವಣಗೆರೆ, ಶಿವಮೊಗ್ಗ ಹಾಗೂ ತುಮಕೂರು ನಗರಗಳಿಗೆ ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಮಂಜೂರಾಗಿರುತ್ತದೆ.<br><br>**ವಾ.ಕ.ರ.ಸಾ.ಸಂಸ್ಥೆಯಲ್ಲಿ** – ಸ್ಮಾರ್ಟ್ ಸಿಟಿ ಯೋಜನೆಯ PMe BUS SEWA ರಡಿಯಲ್ಲಿ ಸಂಸ್ಥೆಯ ಬೆಳಗಾವಿ ನಗರಕ್ಕೆ 100 & ಹುಬ್ಬಳ್ಳಿ-ಧಾರವಾಡ ನಗರಕ್ಕೆ 100 ಬಸ್‌ಗಳಂತೆ ಒಟ್ಟು 200 ಎಲೆಕ್ಟ್ರಿಕ್ ಬಸ್‌ಗಳು ಮಂಜೂರಾಗಿರುತ್ತದೆ.<br><br>**ಕ.ಕ.ರ.ಸಾ.ನಿಗಮದಲ್ಲಿ** - ಕೇಂದ್ರ ಸರ್ಕಾರದ ಪಿ ಎಮ್ ಇ ಬಸ್ ಸೇವಾ ಯೋಜನೆಯಡಿ ನಿಗಮದ ಕಲಬುರಗಿ, ಬಳ್ಳಾರಿ ಹಾಗೂ ವಿಜಯಪುರ ನಗರಗಳಿಗೆ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಕ್ರಮವಾಗಿ 100, 50 ಹಾಗೂ 50 ರಂತೆ ಒಟ್ಟು 200 ವಿದ್ಯುತ್ ಚಾಲಿತ ಬಸ್‌ಗಳು ಮಂಜೂರಾಗಿರುತ್ತದೆ.<br><br>ಸದರಿ ಯೋಜನೆಯಡಿ ಟೆಂಡರ್‌ನಲ್ಲಿ L-1 ಆಗಿ ಆಯ್ಕೆಯಾಗುವ ಬಿಡ್ಡುದಾರರೇ ವಿದ್ಯುತ್ ಚಾಲಿತ ಬಸ್‌ಗಳಿಗೆ ಚಾಲಕರ ಸೇವೆ, ನಿರ್ವಹಣೆ ಹಾಗೂ ಬಸ್ಸುಗಳನ್ನು ಚಾರ್ಜಿಂಗ್‌ಗೊಳಿಸಲು ತಗಲುವ ವಿದ್ಯುತ್ ವೆಚ್ಚವನ್ನು ಸಹ ಪಾವತಿಸುತ್ತಾರೆ. ಆದರೆ, ಸದರಿ ವಿದ್ಯುತ್ ಚಾಲಿತ ಬಸ್ಸುಗಳಿಗೆ ನಿರ್ವಾಹಕರನ್ನು ಸಾರಿಗೆ ನಿಗಮವು ಒದಗಿಸಬೇಕಾಗುತ್ತದೆ.<br><br>ಟೆಂಡರ್‌ನಲ್ಲಿ ಬಿಡ್ಡುದಾರರು Standard ಬಸ್ಸುಗಳಿಗೆ ಸಂಬಂಧಿಸಿದಂತೆ ಬಿಡ್‌ನಲ್ಲಿ ಪ್ರತಿ ಕಿ.ಮೀ.ಗೆ ನಮೂದಿಸುವ ದರದಲ್ಲಿ ಕೇಂದ್ರ ಸರ್ಕಾರವು ಪ್ರತಿ ಕಿ.ಮೀ.ಗೆ ರೂ.24/-ರಷ್ಟು CA (Central Assistance) ಮಾದರಿಯಲ್ಲಿ ನೀಡಲಿದ್ದು ಉಳಿದ ವ್ಯತ್ಯಾಸದ ಮೊತ್ತವನ್ನು ಸಂಬಂಧಪಟ್ಟ ಸಾರಿಗೆ ನಿಗಮವು ಭರಿಸಬೇಕಾಗಿರುತ್ತದೆ.<br><br>ಮುಂದುವರೆದು, ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶೇ.60ರಷ್ಟು ಅನುದಾನವನ್ನು ಕೇಂದ್ರ ಸರ್ಕಾರ ಒದಗಿಸುತ್ತಿದ್ದು, ಉಳಿದ ಶೇ.40ರಷ್ಟು ಅನುದಾನವನ್ನು ಮಾತ್ರ ರಾಜ್ಯ ಸರ್ಕಾರ ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯಡಿ ಎಲೆಕ್ಟ್ರಿಕ್ ಬಸ್ಸುಗಳಿಗೆ ಅವಶ್ಯವಿರುವ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಸಹ ಕೇಂದ್ರ ಸರ್ಕಾರವೇ ಟೆಂಡರ್ ಆಹ್ವಾನಿಸುತ್ತದೆ ಹಾಗೂ ಆಹ್ವಾನಿಸಲಾಗುವ ಟೆಂಡರ್‌ನಲ್ಲಿ ವಿಧಿಸಬಹುದಾದ ಷರತ್ತು ಮತ್ತು ನಿಬಂಧನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಅಭಿಪ್ರಾಯ ಪಡೆದು ಸೂಕ್ತವಾದವುಗಳನ್ನು ಅಳವಡಿಸಿಕೊಂಡು ಕೇಂದ್ರ ಸರ್ಕಾರವೇ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುತ್ತದೆ. |

ಸಂಖ್ಯೆ: ಟಿಡಿ 187 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು